ISSN : 2320-0391

# सृजन ಸೃಜನ

हिन्दी-कन्नड साहित्य और संस्कृति
ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

अप्रैल-जून २०१६
त्रैमासिक पत्रिका



Scanned with CamScanner

# ಪರಿವಿಡಿ


೧. ಮಕ್ಕಳ ಕವಿ ಹ. ಮ. ಪೂಜಾರ ಅವರ ಜೀವನ ಮತ್ತು ಸಾಹಿತ್ಯ • ಪ್ರೊ. ಬಿ. ಬಿ. ಡೆಂಗನವರ ೩೧

೨. ಶಿವಶರಣರ ವಚನಗಳಲ್ಲಿ ದೇಹದ ಪರಿಕಲ್ಪನೆ • ಡಾ. ಎಂ. ಎಸ್. ಮಾಗಣಗೇರಿ ೩೬

೩. ಅರಿತರೆ ನಿನಗೆ ನೀನೇ ಸಿದ್ಧರಾಮ • ಪ್ರಭುಗೌಡ ಸಂಕಾಗೌಡಶಾನಿ ೪೦

೪. ಮೃತಾತ್ಮನ ಹೇಳಿಕೆ • ನಾಗಾರ್ಜುನ (ಹಿಂದಿ) ಅನುವಾದ– ಡಾ. ಎಸ್. ಟಿ. ಮೇರವಾಡೆ ೪೬

೫. ಅಮರೇಶ ನುಗಡೋಣಿ ಅವರ ಕಥೆಗಳಲ್ಲಿ ವಚನಕಾರರು • ವಿಕ್ರಮ ಈ. ಬಸನಗೌಡರ ೪೮

೬ ಡಾ. ನಾಗವೇಣಿಯವರ ಮೂರು ಕಥೆಗಳು : • ಗಂಗಾಧರ ಮಾಸಣಕಟ್ಟಿ ೫೧

**ಅಂಕಣ–೬**

೭ ಅಪಾರ್ಥ • ಡಾ. ಆರ್. ವ್ಹಿ. ಪಾಟೀಲ ೫೬

# ಮಕ್ಕಳ ಕವಿ ಹ. ಮ. ಪೂಜಾರ ಅವರ ಜೀವನ ಮತ್ತು ಸಾಹಿತ್ಯ

• ಪ್ರೊ. ಬಿ. ಬಿ. ಡೆಂಗನವರ

ಮಕ್ಕಳನ್ನು ಕುರಿತು ಮಕ್ಕಳಿಗಾಗಿ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚನೆಯಾಗಿರುವುದು ಕನ್ನಡದ ವಿಶೇಷತೆಯಾಗಿದೆ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಪ್ರಾಧಾನ್ಯತೆ ಇದೆ ಕಥೆ, ಕವನ, ಕಾದಂಬರಿ, ಹಾಸ್ಯ ಪ್ರಬಂಧದಂತಹ ಪ್ರಕಾರಗಳಲ್ಲಿ ಮಕ್ಕಳ ಮನೋಧರ್ಮವನ್ನು ಪರಿಶುದ್ಧಗೊಳಿಸುವ ನಿಟ್ಟಿನಲ್ಲಿ ಮಕ್ಕಳ ಸಾಹಿತ್ಯ ಮೂಡಿ ಬಂದಿರುವುದು ಪಾರಂಪರಿಕ ಹಾಗೂ ವೈಜ್ಞಾನಿಕ ತಳಹದಿಯಲ್ಲಿ ಕೃತಿಗಳು ಸೃಷ್ಟಿಯಾಗಿವೆ ಪುಟ್ಟ ಪುಟ್ಟ ಭಾವಗಳ ವಿಸ್ಮಯ ಜಗತ್ತಿನೊಂದಿಗೆ ಬೆಳೆಯುತ್ತಾ ಬಾಂಧವ್ಯವನ್ನು ಬೆಸೆದು ಕೊಳ್ಳುತ್ತಾ ಹೊಸ ಭಾವನೆ ಚಿಗುರುವ ಮನಸ್ಸುಗಳಿಗೆ ದಾರಿದೀಪವಾಗಿರುವುದು ಈ ಮಕ್ಕಳ ಸಾಹಿತ್ಯ. ಇಂತಹ ಮಕ್ಕಳ ಸಾಹಿತ್ಯವು ಎಲ್ಲಿ ಸಮೃದ್ಧವಾಗಿ ಬೆಳೆದು ಇಂದು ಫಲ ನೀಡುತ್ತಿದೆ. ಈ ರೀತಿಯ ಸಮೃದ್ಧಿ ಬೆಳೆಯ ಫಸಲು ಕನ್ನಡ ಪ್ರದೇಶದ ಬಯಲು ಸೀಮೆ ಗುಮ್ಮಟ ನಗರಿ ವಿಜಯಪುರ ಮಕ್ಕಳ ಸಾಹಿತಿಗಳ ತವರೂರಾಗಿದೆ. ಜಾನಪದ ಸಾಹಿತ್ಯ ವಚನ ಸಾಹಿತ್ಯ ದಂತೆ ಮಕ್ಕಳ ಸಾಹಿತ್ಯ ಕೃಷಿ ತುಂಬಾ ಹುಲುಸಾಗಿ ಬೆಳೆದು ಮಕ್ಕಳ ಸಾಹಿತ್ಯಕ್ಕೆ ಒಂದು ಭದ್ರ ಬುನಾದಿ ಹಾಕಿದ ಹಿರಿಮೆ ವಿಜಯಪುರಕ್ಕಿದೆ. ಪ್ರಾಥಮಿಕ ಶಾಲಾ ಶಿಕ್ಷಕರು ಮಕ್ಕಳೊಂದಿಗೆ ಬೆರೆತು ಮಕ್ಕಳೊಂದಿಗೆ ಹಾಡಿ ಕುಣಿದು ನಲಿದು ಅವರ ಮನಸ್ಸಿನ ಭಾವನೆಗಳನ್ನು ಅರಿತು ಒಂದು ಸುಂದರವಾದ ಮಕ್ಕಳ ತೋಟದಲ್ಲಿ ಸಾಹಿತ್ಯ-ಸಂಸ್ಕೃತಿ ಕಲೆಯ ವಾತಾವರಣ ನಿರ್ಮಿಸಿ ಮಕ್ಕಳೊಂದಿಗೆ ಮಕ್ಕಳಾಗಿ ಮಕ್ಕಳ ಕುರಿತು ಸಾಹಿತ್ಯವನ್ನು ಕವಿತೆಗಳನ್ನು ಚಿಕ್ಕ ಚಿಕ್ಕ ಕಥೆಗಳನ್ನು ರಚಿಸಿ ಮಕ್ಕಳನ್ನು ರಂಜಿಸುತ್ತಾ ಮಕ್ಕಳ ಸಾಹಿತ್ಯವನ್ನು ನಿರ್ಮಿಸಿದ ಶ್ರೇಯಸ್ಸು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಿಶೇಷವಾಗಿ ಲಭಿಸಿದೆ. ಅಂತಹ ಶಿಕ್ಷಕ ಸಾಹಿತಿಗಳಲ್ಲೊಬ್ಬರು ಆದ ಶ್ರೀ ಹ ಮ ಪೂಜಾರ ಅವರು ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ ಅಪೂರ್ವವಾದ ಕೊಡುಗೆಯನ್ನು ಅವರ ಜೀವನ ಮತ್ತು ಸಾಹಿತ್ಯ ಕುರಿತು ಕೆಲವು ವಿಚಾರಗಳನ್ನು ಸಹೃದಯ ಓದುಗರೊಂದಿಗೆ ಹಂಚಿಕೊಳ್ಳುವ ಸಣ್ಣ ಪ್ರಯತ್ನವನ್ನು ಈ ಕಿರು ಲೇಖನದಲ್ಲಿ ಮಾಡಲಾಗಿದೆ.

ಶ್ರೀಯುತ ಹನುಮಂತರಾಯ ಪೂಜಾರ ಅವರು ೧೩.೦೩.೧೯೪೩ ರಲ್ಲಿ ವಿಜಯಪುರ ಜಿಲ್ಲೆಯ ಸಿಂದಗಿಯಲ್ಲಿ ಶ್ರೀ ಮನ್ನಪ್ಪ ಹಾಗೂ ಗುರುಬಾಯಿ ದಂಪತಿಗಳ ಉದರದಲ್ಲಿ ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಸಿಂದಗಿಯಲ್ಲಿ ಪೂರೈಸಿ ತದನಂತರದಲ್ಲಿ ಜಮಖಂಡಿಯ ಬಿ ಎಚ್ ಎಸ್ ಕಲಾ ಮತ್ತು ಟಿ ಜಿ ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪಿ ಯು ಸಿ ಶಿಕ್ಷಣವನ್ನು ಪಡೆದುಕೊಂಡು ಬಿ ಎ ಪದವಿಯನ್ನು ಬಾಹ್ಯ ವಿದ್ಯಾರ್ಥಿಯಾಗಿ ಅಧ್ಯಯನ ಮಾಡಿದರು. ನಂತರ ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಬಾಹ್ಯ ವಿದ್ಯಾರ್ಥಿಯಾಗಿ ಬಿ ಎಡ್ ಪದವಿ ಪಡೆದುಕೊಂಡು ಈ ಪೂರ್ವದಲ್ಲಿ ಲಚ್ಯಾಣದಲ್ಲಿ ಶಿಕ್ಷಣ ತರಬೇತಿಯನ್ನು ಪಡೆದುದರ ಫಲವಾಗಿ ೧೯೬೧ ರಲ್ಲಿ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕಗೊಂಡು ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. ಶ್ರೀ ಹ ಮಾ ಪೂಜಾರ ಅವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸಿಂದಗಿ ತಾಲೂಕಿನ ಕೋರಹಳ್ಳಿ ಆಲಮೇಲ೧೯೬೧ ರಿಂದ೧೯೭೦ ರವರೆಗೆ ಸಹಶಿಕ್ಷಕರಾಗಿ ಕಾರ್ಯ ನಿರ್ವಹಿಸಿ೧೯೭೪ ರಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ಪದೋನ್ನತಿ ಪಡೆದು ವಿಜಾಪುರದ ಗಾಂಧಿ ಚೌಕದಲ್ಲಿರುವ


ISSN : 2320-0391

Scanned with CamScanner

ಸರಕಾರಿ ಮಾದರಿ ಕನ್ನಡ ಹೆಣ್ಣುಮಕ್ಕಳ ಶಾಲೆ ನಂ೧ ರಲ್ಲಿ ಮುಖ್ಯೋಪಾಧ್ಯಾಯರಾಗಿ ೧೯೯೯ ರವರೆಗೆ ಸೇವೆ ಸಲ್ಲಿಸಿದರು. ೧೯೯೯ ರಲ್ಲಿ ಸಿಂದಗಿ ತಾಲೂಕಿನ ಯಂಕಂಚಿ ಪ್ರೌಢಶಾಲೆಗೆ ವರ್ಗವಾಯಿತು. ಆ ಶಾಲೆಯಲ್ಲಿ ಎರಡು ವರ್ಷ ಎಂಟನೇ ತರಗತಿ ಯಿಂದ ೧೦ನೇ ತರಗತಿಯವರೆಗೆ ಇಂಗ್ಲೀಷ್ ವಿಷಯ ಬೋಧನೆ ಮಾಡಿ ವಿದ್ಯಾರ್ಥಿಗಳ ಮನ ಗೆದ್ದವರು. ಇವರು ವಿಜಯಪುರದ ಗಾಂಧೀ ಚೌಕದಲ್ಲಿರುವ ಮಾದರಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಆಯುಕ್ತರು ಭೇಟಿ ನೀಡಿ ಶಾಲೆಯ ಆಡಳಿತ ಹಾಗೂ ಗುಣಮಟ್ಟದ ಬಗ್ಗೆ ಪ್ರಶಂಸೆ ಮಾಡಿದರು. ಇವರ ಕಾರ್ಯಕ್ಷಮತೆಯನ್ನು ಪಾಠ ಬೋಧನಾ ಸಾಮರ್ಥ್ಯವನ್ನು ಗುರುತಿಸಿದ ಸರಕಾರ೧೯೯೮ ರಲ್ಲಿ ಡಾ. ಎಚ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಆದರ್ಶ ಶಿಕ್ಷಕ ಆಯ್ಕೆ ಸಮಿತಿಯನ್ನು ರಚಿಸಿತು. ಆ ಸಮಿತಿಯು ಶ್ರೀ ಹ ಮ ಪೂಜಾರ ಅವರ ಸೇವೆಯನ್ನು ಪರಿಗಣಿಸಿ ಇವರಿಗೆ ಆದರ್ಶ ಶಿಕ್ಷಕ ರಾಜ್ಯ ಪ್ರಶಸ್ತಿಯನ್ನು ಸಪ್ಟಂಬರ್೫ ೧೯೯೮ ರಂದು ಪೂಜಾರ ಅವರಿಗೆ ನೀಡಿ ರಾಜ್ಯ ಸರಕಾರ ಗೌರವಿಸಿತು.

ಇವರು ಸಿಂದಗಿ ತಾಲೂಕಿನ ಯಂಕಂಚಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗ ಇವರ ಸೇವೆಯನ್ನು ಅನುಲಕ್ಷಿಸಿ ಸಪ್ಟಂಬರ್ ೫ ೨೦೦೦ ನೇ ಇಸವಿಯಲ್ಲಿ ಡಾ. ಎಚ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿನ ಸಮಿತಿ ರಾಷ್ಟ್ರ ಪ್ರಶಸ್ತಿಗೆ ಇವರನ್ನು ಆಯ್ಕೆ ಮಾಡಿತು. ಅಂದಿನ ರಾಷ್ಟ್ರಪತಿಗಳಾದ ಶ್ರೀ ಕೆ. ಆರ್. ನಾರಾಯಣ್ ಅವರು ಶ್ರೀ ಹ ಮ ಪೂಜಾರ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಿದರು.

ವೃತ್ತಿ ಜೀವನ ಪ್ರಾರಂಭಿಸಿದ ಶ್ರೀ ಹ ಮ ಪೂಜಾರ ಅವರು ಶಿಕ್ಷಕ ವೃತ್ತಿ ಜೀವನದ ಕುರಿತು ತಮ್ಮ ೩೮ ವರ್ಷದ ಶಿಕ್ಷಕ ವೃತ್ತಿಯಲ್ಲಿ ನನಗೆ ತುಂಬಾ ಸಂತೃಪ್ತಿಯನ್ನು ತಂದಿದೆ. ಯಾವತ್ತೂ ನಾನು ವೃತ್ತಿಯ ಬಗ್ಗೆ ಬೇಸರ ವ್ಯಕ್ತ ಪಡಿಸಿಲ್ಲ. ಈ ವೃತ್ತಿಯಿಂದ ನಾನು ಮಾನಸಿಕವಾಗಿ ಮತ್ತು ದೈಹಿಕವಾಗಿ ತುಂಬಾ ಸದೃಢವಾಗಿದ್ದೇನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ನನ್ನ ಸಾಹಿತ್ಯ ರಚನೆಗೆ ಬಹುತೇಕ ನನ್ನ ವಿದ್ಯಾರ್ಥಿಗಳೇ ಕಾರಣೀಕರ್ತರಾಗಿದ್ದಾರೆ ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ನನ್ನ ಬರವಣಿಗೆಗೆ ಮಕ್ಕಳು ಪ್ರೇರಣಾ ಶಕ್ತಿಯಾಗಿದ್ದಾರೆ. ನನಗೆ ಗಣಿತ ವಿಷಯವೆಂದರೆ ತುಂಬಾ ಅಚ್ಚು ಮೆಚ್ಚಿನ ವಿಷಯ ಗಣಿತ ಬೋಧನೆಯಿಂದ ಬಹಳಷ್ಟು ವಿದ್ಯಾರ್ಥಿಗಳು ನನ್ನನ್ನು ಪ್ರೀತಿಸುತ್ತಿದ್ದರು ಎಂದು ಮುಕ್ತ ಮನಸ್ಸಿನಿಂದ ಹೇಳಿಕೊಳ್ಳುತ್ತಾರೆ.

ಇವರು ಒಬ್ಬ ಒಳ್ಳೆಯ ಮಕ್ಕಳ ಸಾಹಿತಿಯಾಗಿ ಬೆಳೆಯಲಿಕ್ಕೆ ವಿದ್ಯಾರ್ಥಿಗಳು ಹಾಗೂ ಹಿರಿ ಕಿರಿಯ ಸಾಹಿತಿಗಳಾದ ಶ್ರೀ ಶಂ ಗು ಬಿರಾದಾರ, ಸಿ ಸು ಸಂಗಮೇಶ, ಈಶ್ವರಚಂದ್ರ ಚಿಂತಾಮಣಿ, ಶರಣಪ್ಪ ಕಂಚ್ಯಾಣಿ, ಬಾ ಯಿ ಕುಮತೆ, ಫ ಗು ಸಿದ್ದಾಪುರ, ಜಂಬುನಾಥ ಕಂಚ್ಯಾಣಿ, ಶ್ರೀ ಸಂಗಮೇಶ ಬಾಗಲಕೋಟ ಇವರೆಲ್ಲರ ಒಡನಾಟ ಹಾಗೂ ಪ್ರೇರಣೆ ಪ್ರೋತ್ಸಾಹದಿಂದ ನಾನು ಮಕ್ಕಳ ಸಾಹಿತಿಯಾಗಿ ರೂಪುಗೊಳ್ಳಲು ಸಾಧ್ಯವಾಯಿತು ಎಂದು ಯಾವುದೇ ಸಂಕೋಚವಿಲ್ಲದೆ ಎಲ್ಲರನ್ನು ಸ್ಮರಿಸುತ್ತಾರೆ.

ನಮ್ಮ ದೇಶದ ಭವಿಷ್ಯವಿರುವುದು ಮಕ್ಕಳ ಕೈಯಲ್ಲಿ ಇಂದಿನ ಮಕ್ಕಳು ನಾಳಿನ ನಮ್ಮ ಭವಿಷ್ಯವನ್ನು ಉಜ್ವಲಗೊಳಿಸುವ ನಾಗರಿಕರು. ಭಾವಿ ನಾಗರಿಕರನ್ನು ರೂಪಿಸುವ ಗುರುತರ ಜವಾಬ್ದಾರಿ ಶಿಕ್ಷಕರ ಮೇಲಿದೆ ಇದನ್ನು ಮನಗಂಡು ಪೂಜಾರ ಅವರು ವೈಜ್ಞಾನಿಕ ಮತ್ತು ವೈಚಾರಿಕವಾದ ಸಾಹಿತ್ಯವನ್ನು ರಚಿಸುವಲ್ಲಿ ಪ್ರಾಮಾಣಿಕವಾದ ಪ್ರಯತ್ನಮಾಡಿ ಹಲವಾರು ಸೃಜನಾತ್ಮಕ ಲೇಖನಗಳನ್ನು, ಕವಿತೆಗಳನ್ನು, ಕಥೆಗಳನ್ನು, ಹಾಸ್ಯ ಪ್ರಬಂಧಗಳನ್ನು ಬರೆದು ಮಕ್ಕಳಲ್ಲಿ ಭರವಸೆ ಮೂಡಿಸಿದ್ದಾರೆ.

ಇಂದಿನ ಪರಿಸರ ಕಲುಷಿತಗೊಂಡಿದೆ ಆದ್ದರಿಂದ ಬೆಳೆಯುವ ಮಕ್ಕಳಿಗೆ ಒಳ್ಳೆಯ ಮಾರ್ಗದರ್ಶನ ಮಾಡಿ ಬದುಕಿನ ಮೌಲ್ಯಗಳನ್ನು ಹೇಳಿಕೊಡಬೇಕು. ಉತ್ತಮ ಸಮಾಜ ನಿರ್ಮಾಣಕ್ಕೆ ಇವು ಸಹಕಾರಿಯಾಗಬೇಕು. ಬೆಳೆಯುವ ಪೈರು ಮೊಳಕೆಯಲ್ಲಿ ನೋಡು ಎನ್ನುವಂತೆ ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಒಳ್ಳೆಯ ಸಂಸ್ಕಾರ ನೀಡಿ ಅವರು ಉಜ್ವಲ ಭವಿಷ್ಯಕ್ಕೆ ನಾಂದಿ ಹಾಡಬೇಕು ಎಂಬ ಆಲೋಚನೆಯ ಹಿನ್ನಲೆಯಲ್ಲಿ ತಮ್ಮ ವೃತ್ತಿಯ ಆರಂಭದ ದಿನಗಳಿಂದ ನಿವೃತ್ತಿ ವರೆಗೂ ವಿದ್ಯಾರ್ಥಿಗಳ ಏಳಿಗೆಗಾಗಿ ನಿರಂತರ ತಾಲೂಕ ಮಟ್ಟದಲ್ಲಿ ಚಿಣ್ಣರ ನುಡಿಸಿರಿ, ಮತ್ತು ಮಕ್ಕಳ ಹಬ್ಬ ಎಂಬ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ಜೊತೆಗೆ ಮಕ್ಕಳ ಮೇಳ, ವಿಜ್ಞಾನ ಮೇಳ, ಮಕ್ಕಳ ಸಾಹಿತ್ಯ ಸಮ್ಮೇಳನ, ಬಿಡುವಿನ ಮನೆ, ವ್ಯಕ್ತಿತ್ವ ವಿಕಸನ ಶಿಬಿರದಂತಹ ವಿನೂತನ ಕಾರ್ಯಕ್ರಮಗಳನ್ನು ರೂಪಿಸಿ ಈ ಕಾರ್ಯಕ್ರಮದ ಅತಿಥಿಗಳು ಅಧ್ಯಕ್ಷರು ಉಪನ್ಯಾಸಕರು ನಿರೂಪಕರು ಎಲ್ಲವೂ ವಿದ್ಯಾರ್ಥಿಗಳನ್ನೇ ಒಳಗೊಂಡಿದ್ದರಿಂದ ಮಕ್ಕಳ ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗುವದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ಭರವಸೆಯ ಬೆಳಕು ಆಗಿವೆ.



Scanned with CamScanner

ವಿದ್ಯಾ ಚೇತನ ಪ್ರಕಾಶನದ ಮೂಲಕ ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸುವ ಉದ್ದೇಶದಿಂದ ಓದಿ ಕಲಿ ಹಾಡಿ ನಲಿ ಎಂಬ ಕಾರ್ಯಕ್ರಮವನ್ನು ಆಯೋಜಿಸಿ ಮಕ್ಕಳ ಪ್ರಗತಿಗೆ ಕಾರಣೀಭೂತರಾಗಿದ್ದಾರೆ.

ಗ್ರಂಥ ತುಲಾಭಾರ ದಂತಹ ವಿನೂತನ ಕಾರ್ಯಕ್ರಮ ಹಮ್ಮಿಕೊಂಡು ಪ್ರಾಥಮಿಕ ಶಾಲೆಗಳ ಗ್ರಂಥಾಲಯಗಳಿಗೆ ಉಚಿತವಾಗಿ ಪುಸ್ತಕಗಳನ್ನು ವಿತರಿಸಿದ್ದಾರೆ. ಈ ಎಲ್ಲ ಹತ್ತು ಹಲವು ಕಾರ್ಯ ಚಟುವಟಿಕೆಗಳ ಮೂಲಕ ಮಕ್ಕಳಿಗೆ ನಿಯಮಿತವಾಗಿ ಪಾಠ ಬೋಧನೆ ಮಾಡುತ್ತಾ ಸಾಹಿತ್ಯ ರಚನೆಯಲ್ಲಿಯೂ ಕೂಡ ಹಿಂದೆ ಬಿದ್ದಿಲ್ಲ ಹಲವಾರು ಕೃತಿಗಳ ರಚನೆ ಮಾಡಿ ಮಕ್ಕಳ ಸಾಹಿತ್ಯ ಲೋಕದಲ್ಲಿ ತಮ್ಮ ಹೆಸರನ್ನು ಭದ್ರ ಪಡಿಸಿಕೊಂಡಿದ್ದಾರೆ. ಅವರ ಸಾಹಿತ್ಯ ರಚನೆ ಈ ಕೆಳಗಿನಂತಿವೆ–

**ಸ್ವರಚಿತ ಕೃತಿಗಳು**

೧. ನೀತಿಯ ಬದುಕು (ಮಕ್ಕಳಿಗಾಗಿ ಕಥಾ ಸಂಕಲನ)
೨. ಪರಿಸರ (ಮಕ್ಕಳಿಗಾಗಿ ಕವನ ಸಂಕಲನ)
೩. ಕಾಯಕಯೋಗಿ (ಚರಿತ್ರೆ)
೪. ಪರೋಪಕಾರಿ (ಮಕ್ಕಳಿಗಾಗಿ ಕಥಾ ಸಂಕಲನ)
೫. ತುಂಟ ಮಂಗ (ಮಕ್ಕಳಿಗಾಗಿ ಕಥಾ ಸಂಕಲನ)
೬. ಗೋಲಗೇರಿಯ ಗೊಲ್ಲಾಳೇಶ್ವರ (ಚರಿತ್ರೆ)
೭. ಸಂಪಾದಿತ ಕೃತಿಗಳು
೮. ರಸ ಕಿರಣ (ಶೈಕ್ಷಣಿಕ ಸಮ್ಮೇಳನದ ಸಂಸ್ಮರಣ ಗ್ರಂಥ)
೯. ವಿಜಯವಾಣಿ (ಜಿಲ್ಲಾ ಸಾಹಿತ್ಯ ಸಮೇಳನದ ಸಂಸ್ಮರಣ ಗ್ರಂಥ)
೧೦. ಚಿಣ್ಣರ ಚೇತನ (ಜಿಲ್ಲಾ ಮಕ್ಕಳ ಸಾಹಿತ್ಯ ಸಮೀಕ್ಷೆ)
೧೧. ಪಂಚಾಕ್ಷರಿ ಪ್ರಭೆ (ಮಕ್ಕಳ ಕಲೆ ಕುರಿತು ಲೇಖನಗಳ ಸಂಕಲನ)
೧೨. ಪುಟ್ಟ ಕಾಣಿಕೆ (ಮಕ್ಕಳ ಕಥಾಸಂಕಲನ)
೧೩. ಸುವರ್ಣ ಸಂಭ್ರಮ (ಮಕ್ಕಳ ಕವನ ಸಂಕಲನ)
೧೪. ಮಕ್ಕಳ ಸಾಹಿತ್ಯ ಚಿಂತನ (ಮಕ್ಕಳ ಸಾಹಿತ್ಯ ಸಮೀಕ್ಷೆ)

ನಿಯತಕಾಲಿಕೆಗಳಲ್ಲಿ ಪ್ರಕಟಿತ ವಿವಿಧ ಕಲೆಗಳು ಜೀವನ ಶಿಕ್ಷಣ ಸಂಯುಕ್ತ ಕರ್ನಾಟಕ ಪ್ರಜಾವಾಣಿ ವಿಜಯ ಕರ್ನಾಟಕ ಕರ್ಮವೀರ ಸುಧಾ ಮಯೂರ ಈ ಮೊದಲಾದ ನಿಯತಕಾಲಿಕೆಗಳಲ್ಲಿ ಸ್ವರಚಿತ ಕವನ ಕಥೆ ಹಾಸ್ಯ ಪ್ರಬಂಧಗಳು ಪ್ರಕಟಣೆ ಗೊಂಡಿವೆ.

**ಪಠ್ಯಪುಸ್ತಕಗಳಲ್ಲಿ ಸಾಹಿತ್ಯ ಪ್ರಕಟ**

ಕರ್ನಾಟಕ ರಾಜ್ಯದ ಎಂಟನೇ ತರಗತಿಯ ತೃತೀಯ ಭಾಷಾ ಕನ್ನಡ ಪಠ್ಯ ದಲ್ಲಿ 'ಆಸರೆ ಕಥೆ' ಪ್ರಕಟಗೊಂಡಿದೆ. ಮಹಾರಾಷ್ಟ್ರ ರಾಜ್ಯದ ಎಂಟನೇ ತರಗತಿಯ ದ್ವಿತೀಯ ಭಾಷಾ ಕನ್ನಡ ಪಠ್ಯದಲ್ಲಿ 'ನೀತಿಯ ಬದುಕು' ಎಂಬ ಕಥೆ ಪ್ರಕಟವಾಗಿದೆ. ಸಿ ಬಿ ಎಸ್ ಸಿ ಹಾಗೂ ಐ ಸಿ ಎಸ್ ಇ ದ ಳ ಮತ್ತು ಮೂರನೆಯ ತರಗತಿಯ ಕನ್ನಡ ಪಠ್ಯದಲ್ಲಿ ಕ್ರಮವಾಗಿ 'ನಮ್ಮ ಊರು' ಹಾಗೂ 'ಕಾಮನಬಿಲ್ಲು' ಎಂಬ ಕವಿತೆಗಳು ಪ್ರಕಟಣೆ ಗೊಂಡಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸುವ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ಪೂಜಾರ ಅವರ ಕಥೆಗಳು ಪ್ರಕಟಗೊಂಡಿವೆ.

ಸರಕಾರದ ವಿವಿಧ ಸಮಿತಿಗಳಲ್ಲಿಯೂ ಕೂಡ ಇವರ ಸೇವೆ ಸಂದಿದೆ. ಇವರ ಪಾರದರ್ಶಕವಾದ ವ್ಯಕ್ತಿತ್ವವನ್ನು ಸರಕಾರ ಬಳಸಿಕೊಂಡಿದೆ. ಸಾಕ್ಷರತಾ ಪಠ್ಯ ರಚನಾ ಸಮಿತಿಯಲ್ಲಿ ವಿಜಯಪುರ ಜಿಲ್ಲೆಗಾಗಿ ರಚಿಸಲ್ಪಟ್ಟ ವಿಜಯ ದೀಪ ೧, ೨, ೩ ಭಾಗಗಳಲ್ಲಿ ಪಠ್ಯ ಪುಸ್ತಕವನ್ನು ರಚಿಸಿಕೊಟ್ಟಿದ್ದಾರೆ. ಬಾಳಿಗೆ ಬೆಳಕು ಎಂಬ ಸಾಕ್ಷರತಾ ಪಠ್ಯ ರಚನೆಯಲ್ಲಿ ಕೂಡ ಕಾರ್ಯ ನಿರ್ವಹಿಸಿದ ಅನುಭವ ಇವರಿಗಿದೆ.

೨೦೦೧–೨೦೦೨ ರಲ್ಲಿ ಆರನೇ ತರಗತಿಯ ದ್ವಿತೀಯ ಭಾಷಾ ಕನ್ನಡ ಪಠ್ಯರಚನಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕಾ ಪ್ರತಿನಿಧಿಯಾಗಿ ಮೂರು ಬಾರಿ ಸೇವೆಸಲ್ಲಿಸಿದ್ದಾರೆ. "ಗೌರವ ವನ್ಯಜೀವಿ ಪಾಲಕ" ಎಂಬ ಅರಣ್ಯ ಇಲಾಖೆಯ ನಿರ್ದೇಶನದಂತೆ ಕರ್ನಾಟಕ ಸರಕಾರದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ್ದಾರೆ. "ಬಾಲನ್ಯಾಯ ಕಾಯ್ದೆಯಡಿ ಕರ್ನಾಟಕ ಸರಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ." ವಿಜಯಪುರ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಸಂಘಸಂಸ್ಥೆಗಳಿಂದ ಶ್ರೀ ಹ ಮ ಪೂಜಾರ ಅವರ ಸಾಹಿತ್ಯ ಸಾಧನೆಗೆ ಸಂದ ಗೌರವ ಪ್ರಶಸ್ತಿ ಪುರಸ್ಕಾರಗಳು ಇವರನ್ನು ಅರಿಸಿಕೊಂಡು ಬಂದಿವೆ.

೧೯೯೪ರಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠದಿಂದ ಸಾಹಿತ್ಯ ಪ್ರಶಸ್ತಿಯ ಗೌರವ ಬನಹಟ್ಟಿಯ ಮಕ್ಕಳ ಸಂಗಮದಿಂದ ಮಹಾದೇವಪ್ಪ ಕರ್ಲಟ್ಟಿ ಸಾಹಿತ್ಯ


ISSN : 2320-0391
Scanned with CamScanner

ಪ್ರಶಸ್ತಿಯ ಗರಿ ೨೦೧೧ರಲ್ಲಿ ಧಾರವಾಡದ ಚಿಲಿಪಿಲಿ ಪ್ರಕಾಶನ ರವರಿಂದ "ಶಿಕ್ಷಣ ಸಿರಿ" ಪ್ರಶಸ್ತಿ ಪುರಸ್ಕಾರ ೨೦೦೬ರಲ್ಲಿ ನಾಲತವಾಡ ವಿಜಯಪ್ರಕಾಶನದಿಂದ ಶ್ರೀ ಗುರು ಪ್ರಶಸ್ತಿಗೆ ಭಾಜನರಾಗಿದ್ದಾರೆ ೨೦೦೯ರಲ್ಲಿ ಬೆಳಗಾವಿಯ ಕಾರಂಜಿಯು ಮಠದಿಂದ ಡೆಪ್ಯೂಟಿ ಚೆನ್ನಬಸಪ್ಪ ಪ್ರಶಸ್ತಿಯ ಗೌರವ ೨೦೧೦ರಲ್ಲಿ ವಿಜಯಪುರದ ಉಜ್ವಲ ಸಂಸ್ಥೆಯವರಿಂದ 'ಮಕ್ಕಳ ಮಿತ್ರ' ಎಂಬ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

## ಸರಕಾರ ಕೊಡಮಾಡಿದ ಪ್ರಶಸ್ತಿಗಳು

೧೯೯೮ ರಲ್ಲಿ ಕರ್ನಾಟಕ ಘನ ಸರಕಾರ ಆದರ್ಶ ಶಿಕ್ಷಕ ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ೨೦೦೦ರಲ್ಲಿ ಭಾರತ ಸರ್ಕಾರ ಆದರ್ಶ ಶಿಕ್ಷಕ ರಾಷ್ಟ್ರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೨೦೧೪ರಲ್ಲಿ ಕರ್ನಾಟಕ ಸರಕಾರವು ಇವರ ಸಾಮಾಜಿಕ ಸೇವೆಯನ್ನು ಪರಿಗಣಿಸಿ ಹಿರಿಯ ನಾಗರಿಕ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದೆ. ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಿಂದಗಿ ತಾಲೂಕಿನ ಬೋರಗಿ ಪುರದಾಳ ದಲ್ಲಿ ಜರುಗಿದ ಸಿಂದಗಿ ತಾಲೂಕಾ ಪ್ರಥಮ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ೧೫ ೬ ೨೦೧೫ ರಲ್ಲಿ ಗೌರವ ಸಲ್ಲಿಸಿದೆ. ಶ್ರೀ ಹ ಮ ಪೂಜಾರ ಅವರು ಶಿಕ್ಷಕ ವೃತ್ತಿಯಲ್ಲಿ ಇದ್ದಾಗ ಮಕ್ಕಳಿಗೆ ವಿಶೇಷ ಚಟುವಟಿಕೆ ಮತ್ತು ಮಕ್ಕಳ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಾಕಿ ಕೊಳ್ಳುವುದು ಇವರ ಪ್ರವೃತ್ತಿ ಆಗಿತ್ತು. ಮಕ್ಕಳಿಗೆ ಕಥೆ ಹಾಡು ವಿವಿಧ ಆಟಗಳನ್ನು ಆಡಿಸುವುದು ಇವರ ಹವ್ಯಾಸವಾಗಿತ್ತು. ಈ ರೀತಿ ಮಕ್ಕಳು ಒಂದೆಡೆ ಸೇರಿದಾಗ ಮಕ್ಕಳ ಕೂಟ ಎಂದು ಸಂತೋಷ ಪಡುತ್ತಿದ್ದರು. ಆಟ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಮಕ್ಕಳಿಗಾಗಿ ಮಕ್ಕಳ ಬ್ಯಾಂಕ್ ಹಾಗೂ ಚಾಚಾ ನೆಹರು ಎಂಬ ಹೆಸರಿನ ವಿಜ್ಞಾನ ಮಂಡಳ ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಿ ಕ್ರಿಯಾಶೀಲ ರಾಗುವಂತೆ ಪ್ರೇರೇಪಿಸುತ್ತಿದ್ದರು. ತಮ್ಮ ೩೮ ವರ್ಷದ ಸುದೀರ್ಘ ವಾದ ಶಿಕ್ಷಕ ವೃತ್ತಿಯಲ್ಲಿ ಎಂದೂ ಬೇಸರ ಪಟ್ಟುಕೊಂಡವರಲ್ಲ ಸದಾ ಮಕ್ಕಳೊಂದಿಗೆ ಉತ್ಸಾಹದಿಂದ ಚೇತನದ ಚಿಲುಮೆಯಾಗಿ ಬದುಕಿದವರು ವಿದ್ಯಾರ್ಥಿಗಳ ಮನಗೆದ್ದು ಅವರ ಅಭಿಮಾನಕ್ಕೆ ಪಾತ್ರರಾದವರು. ಶಿಕ್ಷಕ ವೃತ್ತಿಯೊಂದಿಗೆ ಮಕ್ಕಳ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಶ್ರೀ ಹ. ಮ. ಪೂಜಾರ ಅವರಿಗೆ ಸಾಹಿತ್ಯ ರಚಿಸುವಲ್ಲಿ ವಸ್ತುವಿನ ಬರವಿಲ್ಲ ಈ ಪ್ರಪಂಚದ ಯಾವುದೇ ಒಂದು ತುಣುಕು ಸಾಹಿತ್ಯಕ್ಕೆ ವಸ್ತುವಾಗಬಲ್ಲದು ಎಂಬುದನ್ನು ಅರಿತು ಹಲವಾರು ವಿಷಯಗಳನ್ನು ತಮ್ಮ ಸಾಹಿತ್ಯದಲ್ಲಿ ನಿರೂಪಿಸಿದ್ದಾರೆ. ಗದ್ಯ, ಪದ್ಯ, ಕಥೆ, ಪ್ರಬಂಧ, ಹಾಸ್ಯ ಕುರಿತು ಬರೆದಿದ್ದಾರೆ. ಮೂಢನಂಬಿಕೆ ಜಾತಿ ಮತ ಧರ್ಮ ಭಾಷೆಗಳ ಕುರಿತು ತಮ್ಮ ಸಾಹಿತ್ಯದಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತ ಪಡಿಸಿದ್ದಾರೆ. ಹೆಚ್ಚುತ್ತಿರುವ ವಾಯುಮಾಲಿನ್ಯ ಜಲಮಾಲಿನ್ಯ ಹೀಗೆ ವಿಶ್ವವ್ಯಾಪಿಯಾಗಿ ಹಬ್ಬುತ್ತಿರುವ ಪರಿಸರ ಮಾಲಿನ್ಯದ ಕುರಿತು ಮನವರಿಕೆ ಮಾಡಿ ಕೊಡುವ ಪರಿಸರ ಕಾಳಜಿ ಶ್ರೀ ಹ ಮ ಪೂಜಾರ ಅವರ ಕವಿತೆಗಳಲ್ಲಿ ಸರಳವಾದ ಸುಂದರ ಶೈಲಿಯಲ್ಲಿ ಅರ್ಥಗರ್ಭಿತವಾಗಿ ರಚನೆಯಾಗಿದ್ದಾವೆ. ಪರಿಸರ ಕುರಿತಾದ ಕೆಲವು ಪದ್ಯಗಳನ್ನು ನಾವು ಉದಾಹರಣೆಗಾಗಿ ನೋಡಬಹುದು.

ತರು ಪರಿಸರ ಎಂಬ ಪದ್ಯದಲ್ಲಿ

**ಧರೆಯ ಮೇಲೆ ತುರುಗಳೆಲ್ಲ**
**ತುಂಬಾ ಬೆಳೆದು ನಿಂತಿವೆ**
**ಹಸಿರು ಎಲೆಗಳನ್ನು ಬಿಟ್ಟು**
**ಇಳೆಗೆ ಕಳೆಯ ತಂದಿವೆ.**
**ಹೂವು ಹಣ್ಣು ನೆರಳು ಕೊಡುತ**
**ನಮಗೆ ನೆರವು ನೀಡಿವೆ.**
**ಮರವ ಕಡಿವ ಮನುಜ ಗುಣಕೆ**
**ತುಂಬಾ ನೊಂದುಕೊಂಡಿವೆ.**

ಭೂಮಿಯ ಮೇಲಿನ ಮರ ಗಿಡಗಳು ಜಾತಿ ಮತ ಭೇದವಿಲ್ಲದೆ ಮಾನವನಿಗೆ ಪ್ರಾಣಿ-ಪಕ್ಷಿಗಳಿಗೆ ಹೇಗೆ ಉಪಕಾರಿಯಾಗಿವೆ ಎಂಬ ಸಹಕಾರ ಮನೋಭಾವನೆಯ ಉದಾತ್ತವಾದ ವಿಚಾರವನ್ನು ಕವಿಯು ಇಲ್ಲಿ ಸುಂದರವಾಗಿ ಚಿತ್ರಿಸಿರುವುದನ್ನು ಗಮನಿಸಬೇಕು. ದಿನಾಲು ಮಕ್ಕಳಿಗೆ ಪಾಠ ಬೋಧನೆ ಮಾಡುತ್ತಾ ಇಂತಹ ಸುಂದರವಾದ ಕವಿತೆಯನ್ನು ಬರೆದು ಕವಿ ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಮೂಡಿಸುವಂತಹ ವಿಚಾರ ಗಮನಾರ್ಹವಾದುದು.

'ನಾಡಿನ ಸಿರಿ' ಎಂಬ ಇನ್ನೊಂದು ಪದ್ಯದಲ್ಲಿ ಕಾಡಿನ ಹಿರಿಮೆಯನ್ನು ಕುರಿತು ಕವಿ ಹೀಗೆ ಹಾಡಿದ್ದಾರೆ.

**ಕಾಡನೊಮ್ಮೆ ನೋಡ ಬನ್ನಿ**
**ನಾಡ ಕುವರರೆ**
**ನಾಡ ಸಿರಿ ಯು ಇಂಥ ಕಾಡು**
**ನಮಗೆ ಆಸರೆ**
**ಗಂಧ ಬಿಟೆ ತೇಗು ಎಲ್ಲ**
**ಇಲ್ಲಿ ಬೆಳೆದಿವೆ**
**ಗಾಳಿ ಬೀಸಿ ತಂಪು ಸೂಸಿ**
**ಮಳೆಯ ತರುತಿವೆ.**

ಕಾಡಿನ ಒಡಲು ಹೇಗೆ ಖನಿಜ ಸಂಪತ್ತು ಗಿರಿ ಪರ್ವತಗಳಿಂದ ತುಂಬಿಕೊಂಡಿದೆಯೋ ಹಾಗೆ ಗಂಧ ಬಿಟೆ ತೇಗು ಮರಗಳಿಂದ ತುಂಬಿಕೊಂಡು ಪ್ರಕೃತಿಯು ಸೊಬಗಿನಿಂದ ಹೇಗೆ ಕಂಗೊಳಿಸುತ್ತಿದೆ ಪರಿಸರದ ಶ್ರೀಮಂತಿಕೆಯಿಂದ ಮೋಡವಾಗಿ ಮಳೆ ಸುರಿದು ಭೂಮಿಯನ್ನು ಹೇಗೆ ತಂಪುಗೊಳಿಸುತ್ತದೆ ಎಂಬ ವೈಜ್ಞಾನಿಕ ಸತ್ಯವನ್ನು ಕವಿ ಬಿಚ್ಚಿಡುವ ರೀತಿ ತುಂಬಾ ಸೊಗಸಾಗಿದೆ. ಶ್ರೀ ಹ ಮ ಪೂಜಾರ ಅವರು ಪದ್ಯದ ಜೊತೆಗೆ ಹಲವಾರು ನೀತಿ ಪ್ರಧಾನವಾದ ಮಕ್ಕಳ ಕಥೆಗಳನ್ನು ಬರೆದು ಮಕ್ಕಳ ಮನಸ್ಸನ್ನು ಅರಳಿಸುವ ಪ್ರಯತ್ನ ಮಾಡಿದ್ದಾರೆ. ಪೂಜಾರ ಅವರು ತಾವು ಕಂಡ ಚಿಕ್ಕ ಚಿಕ್ಕ ಘಟನೆಗಳನ್ನೇ ತಮ್ಮ ಕಥೆಗಳಿಗೆ ಕಥಾ ವಸ್ತುವನ್ನಾಗಿಸಿಕೊಂಡಿದ್ದಾರೆ. ೧೯೯೬ ರಲ್ಲಿ ಮೊದಲ ಕಥಾ ಸಂಕಲನ ನೀತಿಯ ಬದುಕು ಎಂಬ ತಲೆ ಬರಹದಿಂದ ಪ್ರಕಟಗೊಂಡಿದೆ. ಅವರ ಎರಡನೆಯ ಕಥಾ ಸಂಕಲನ ಪರೋಪಕಾರಿ ಇದು ೨೦೦೫ರಲ್ಲಿ ಪ್ರಕಟವಾಗಿದೆ. ಮಕ್ಕಳ ಮಾನಸಿಕ ಮತ್ತು ಬೌದ್ಧಿಕ ವಿಕಸನಕ್ಕೆ ಈ ಕಥೆಗಳು ಪ್ರೇರಣೆ ನೀಡುವಂತಹ ಕಥೆಗಳಾಗಿವೆ. ಪ್ರಾಮಾಣಿಕತೆ ಪರೋಪಕಾರ ಸಾಹಸ ಸದಾಚಾರ ದಂತಹ ಸದ್ಗುಣಗಳನ್ನು ಕಥೆಗಳ ಮೂಲಕ ಬಿಂಬಿಸುವ ಪ್ರಯತ್ನವನ್ನು ಕಥೆಗಾರರು ಮಾಡಿರುವುದು ಸಾರ್ಥಕ್ಯ ಗೊಂಡಿದೆ. ಅವರ ಈ ೨ ಕಥಾ ಸಂಕಲನಗಳಲ್ಲಿ ೧೮ ಕಥೆಗಳನ್ನು ಒಳಗೊಂಡಿದೆ. ಇವರು ಬರೆದ ಕಥೆ ಗಳಲ್ಲಿ ನೀತಿ ಕಥೆಗಳು ಮೂಢನಂಬಿಕೆ ಸಂಕೀರ್ಣದಂತಹ ಕಥೆಗಳನ್ನು ಬರೆದಿದ್ದಾರೆ.

ಇವರ ನೀತಿ ಕಥೆ ಗಳಲ್ಲಿ ಬರುವ ಪ್ರಾಮಾಣಿಕತೆ ಒಗ್ಗಟ್ಟಿನ ಫಲ ಪರೋಪಕಾರದಂತಹ ಕಥೆಗಳಿಂದ ಮಕ್ಕಳಲ್ಲಿ ನೈತಿಕತೆಯನ್ನು ಮತ್ತು ಪ್ರಾಮಾಣಿಕ ಗುಣಗಳನ್ನು ಬೆಳೆಸುವಲ್ಲಿ ತುಂಬಾ ಸಹಕಾರಿಯಾಗಿವೆ. ಈ ಕಥೆಗಳು ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ಪ್ರಕಟಗೊಂಡು ಬಹುಮಾನ ಪಡೆದುಕೊಂಡಿವೆ ಜೊತೆಗೆ ಓದುಗರ ಗಮನ ಸೆಳೆದಿವೆ.

ಶ್ರೀ ಹ. ಮ. ಪೂಜಾರ ಅವರು ಕವಿತೆ ಕಥೆ ಪ್ರಬಂಧಗಳ ಜೊತೆಗೆ ಜೀವನ ಚರಿತ್ರೆಯುನ್ನು ಬರೆದಿದ್ದಾರೆ. ಕಾಯಕಯೋಗಿ ಸಿಂದಗಿಯ ಚನ್ನವೀರ ಸ್ವಾಮಿಗಳ ಚರಿತ್ರೆಯನ್ನು ಕುರಿತು ಚನ್ನವೀರ ಸ್ವಾಮಿಯವರ ಜೀವನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ೧ ಸಾರ್ಥಕ ಪ್ರಯತ್ನವನ್ನು ಈ ಪುಟ್ಟ ಕೃತಿಯಲ್ಲಿ ಅವರ ಯೋಗ ಸಿದ್ಧಿ ಕರ್ಮ ಮಾರ್ಗ ಮತ್ತು ಮನುಕುಲದ ಶ್ರೇಯೋಭಿವೃದ್ಧಿಗೆ ಅವರು ಶ್ರಮಿಸಿದ ರೀತಿಯನ್ನು ಕಥೆಯ ಮೂಲಕ ಸಂಕ್ಷಿಪ್ತ ರೂಪದಲ್ಲಿ ತುಂಬಾ ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ.

■■

ನೂತನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ತಿಕೋಟಾ, ವಿಜಯಪುರ
ಮೊ. ೯೯೦೨೪೯೫೬೯೫

Scanned with CamScanner

RNI Regd. No. KARBIL/2014/54464

Postal Regd. No/ PMG/KA/NK/BJP/60/2017-19

## बाबा ने कहा था

बलि, भेड बकरियों की दी जाती है,
कभी शेरो की नहीं
इसलिए बाबा ने कहा
बेटों, शेर बनो, बकरी नहीं
शेर बनोगे तो, तुमसे डरेगा जमाना
फिर तुम पा सकोगे-सत्ता, सम्मान, समता
जो दीनता से अभी नहीं है पाना ।
बाबा ने कहा था
शेर में कुछ विशेष गुण भी होते हैं दोस्तों !
शेर भूखा मर जाएगा, पर घास नहीं खाएगा ।
शेर दुश्मन पर टूटेगा, जीवन तक जूझेगा,
पीठ न दिखाएगा, सिर न झुकाएगा ।
शेर, भेड-बकरियों की तरह, झुंडों में नहीं चलता,
अरे शेर तो शेर है,वह अकेला ही सवा शेर है
वह अपना रास्ता खुद बनाता है,
फिर आगे कदम बढाता है और दूसरों के लिए
अपनी लीक छोड जाता है ।
जो बलवान है, वह किसी को
'अभय' दान दे सकता है,
जो धनवान है वही किसी को
धन दान ने सकता है
जो निर्बल है,वह दूसरे की क्या रक्षा कर पाएगा ?
जो निर्धन है, भूखा है,
वह दूसरों को क्या खिलाएगा ?
इसलिए, मेरे दोस्तों
बाबा का कहा मानो
भेड-बकरियाँ नही, शेर बनो ।

– सोहनपाल ङ्सुमनाक्षन'

## ಅಪ್ಪ ಹೇಳಿದ್ದನು

ಬಲಿ, ಕುರಿ-ಕೋಳಿಗಳಿಗೆ ಕೊಡುವುದುಂಟು
ಹುಲಿಗೆ ಕೊಡುವುದಿಲ್ಲ
ಅದಕ್ಕಾಗಿ ಅಪ್ಪ ಹೇಳಿದ್ದನು
ಮಗನೆ ಹುಲಿಯಾಗು, ಕುರಿಯಾಗಬೇಡಾ
ಹುಲಿಯಾದರೆ ನಿನಗೆ ಜಗತ್ತೆ ಅಂಜುತ್ತದೆ
ಅದರೊಂದಿಗೆ ದೊರೆಯುವದು ಅಧಿಕಾರ,
ಸನ್ಮಾನ, ಸಮಾನತೆ
ದೀನತೆಯಿಂದ ಇಂದಿನವರೆಗೂ ದೊರೆತಿಲ್ಲ
ಅಪ್ಪ ಹೇಳಿದ್ದನು.
ಹುಲಿಯ ಕೆಲವು ವಿಶೇಷ ಗುಣಗಳಾಗುತ್ತವೆ ಗೆಳೆಯರೆ,
ಹುಲಿ ಹಸಿವಿನಿಂದ ಸಾಯುತ್ತದೆ ಆದರೆ ಹುಲ್ಲು ತಿನ್ನುವುದಿಲ್ಲ
ಹುಲಿ ವೈರಿಗಳ ಆಕ್ರಮಿಸುವುದು, ಜೀವನದ
ಕೊನೆಯವರೆಗೂ ಹೊರಾಡುವುದು
ಬೆನ್ನು ತೋರಿಸುವುದಿಲ್ಲ, ತಲೆ ಬಾಗಿಸುವುದಿಲ್ಲ,
ಹುಲಿ ಕುರಿಗಳಂತೆ, ಗುಂಪಿನಲ್ಲಿ ನಡೆಯುವುದಿಲ್ಲ
ಅರೇ ಹುಲಿ ಇದೆ, ಹುಲಿ, ಅದೊಂದು ಸವಾಸೇರ ಇದೆ.
ಅದು ತನ್ನ ದಾರಿಯನ್ನು ಸ್ವತಃ ತಯಾರಿಸುತ್ತದೆ
ಹಾಗೆಯೆ ಮುಂದೆ ನಡೆಯುತ್ತದೆ ಮತ್ತು
ಬೇರೆಯವರಿಗೂ ಸಹ
ತನ್ನ ಗುರ್ತು ಬಿಟ್ಟು ಹೋಗುತ್ತದೆ.
ಯಾರು ಬಲವಾನರಿದ್ದಾರೋ, ಅವರು ಯಾರಿಗೂ
ಅಂಜದೆ ದಾನ ಕೊಡಬಹುದು
ಧನವಿದ್ದರೆ ಆತ ಯಾರಿಗಾದರೂ
ಧನ ದಾನ ಮಾಡಬಹುದು
ಯಾರು ನಿರ್ಬಲರಿದ್ದಾರೊ
ಅವರು ಬೇರೆಯವರ ರಕ್ಷಣೆ ಹೇಗೆ ಮಾಡುತ್ತಾರೆ?
ಬಡವ, ಹಸಿದವ
ಬೇರೆಯವರಿಗೆ ತಿನಿಸಲು ಸಾಧ್ಯವೆ?
ಅದಕ್ಕಾಗಿಯೇ ಗೆಳೆಯರೆ, ಅಪ್ಪ ಹೇಳಿದ್ದು ಕೇಳಿರಿ-
ಕುರಿ-ಕೋಳಿಯಾಗದೆ ಹುಲಿಯಾಗಿ.

– ಸೊಹನಪಾಲ 'ಸುಮನಾಕ್ಷನ'

ISSN 2320-0391

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,
विजयपुर - 586103 (कर्नाटक)

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,
ವಿಜಯಪುರ - ೫೮೬೧೦೩ (ಕರ್ನಾಟಕ)

Scanned with CamScanner